ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

# ಯುವ ಗಣಿತಜ್ಞರ ಹುಟ್ಟು ಹಾಕುವುದು ವಿವಿ ಮುಖ್ಯ ಗುರಿ: ಬಸವರಾಜ ಹೊರಟ್ಟಿ



**ಧಾರವಾಡ, ಆ.3:** ಉಪನ್ಯಾಸಗಳು, ವಿಚಾರ ಸಂಕಿರಣಗಳು ಕಲಿಕೆಯ ಜೊತೆಗೆ ಸಂಶೋಧನೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯು ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಕವಿವಿಯ ಗಣಿತಶಾಸ್ತ್ರ ವಿಭಾಗವು, ಪಾವಟೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸ್ ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಗಣಿತ ವಿಶ್ಲೇಷಣೆ ಮತ್ತು ಅದರ ಅನ್ವಯಗಳ ಕುರಿತು ಮೂರು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಯಿತು.

ಕವಿವಿಯ ಗಣಿತಶಾಸ್ತ್ರ ವಿಭಾಗವು ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿರುವುದು ವಿದ್ಯಾರ್ಥಿ ಸಮೂಹಕ್ಕೆ ಸಹಕಾರಿಯಾಗಲಿದೆ. ಯುವ ಗಣಿತಶಾಸ್ತ್ರಜ್ಞರು ಬೆಳೆಸುವಲ್ಲಿ ವಿಭಾಗವು ಶ್ರಮಿಸುತ್ತಿದೆ ಎಂದರು. ಅಲ್ಲದೆ ಪಾವಟೆಯವರು ನಮ್ಮ ಕನ್ನಡ ನಾಡಿನಲ್ಲಿ ಹುಟ್ಟಿರುವುದು ನಮ್ಮ ಸೌಭಾಗ್ಯ, ವಿದ್ಯಾರ್ಥಿಗಳಲ್ಲರೂ ಅವರಂತಾಗಲು ಪ್ರಯತ್ನಿಸಿಬೇಕು ಹಾಗೂ ಅವರನ್ನು ಅನುಸರಿಸಿಬೇಕು ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕವಿವಿಯ ಕುಲಪತಿ ಪ್ರೊ. ಕೆ.ಬಿ. ಗುಡಸಿ ಮಾತನಾಡಿ, ವಿದ್ಯಾರ್ಥಿಗಳು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ಅವರಿಂದ ಜ್ಞಾನವನ್ನು ಪಡೆದುಕೊಳ್ಳಬೇಕು. ಜೊತೆಗೆ ವಿಶ್ವವಿದ್ಯಾಲಯದ ನೈಸರ್ಗಿಕ ಸೌಂದರ್ಯವನ್ನು ಆನಂದಿಸಿ ಎಂದು ಹೇಳಿದರು.

ಕವಿವಿಯ ಮಾಜಿ ಕುಲಪತಿ ಪ್ರೊ. ಹೆಚ್.ಬಿ. ವಾಲಿಕಾರ ಮಾತನಾಡಿ, ತರ್ಕವು ಗಣಿತಶಾಸ್ತ್ರದ ಅಡಿಪಾಯ. ಡಾ. ಡಿ.ಸಿ. ಪಾವಟೆಯವರ ಜನ್ಮದಿನದಂದು ಇಂತಹ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಸಂತಸದ ವಿಷಯ ಎಂದರು.

ಸಮ್ಮೇಳನದಲ್ಲಿ ಪ್ರೊ. ನಿಜಲಿಂಗಪ್ಪ ವೈ. ಮಟ್ಟಿಹಾಳ್, ಡಾ. ಎ.ಚೆನ್ನಪ್ಪ, ಡಾ. ಆರ್ಯಕುಮಾರ ಚಂದ, ಪ್ರೊ. ಎನ್.ಬಿ. ನಡುವಿನಮನಿ, ಡಾ. ಜಿ.ಹರಿಹರನ್, ಡಾ. ಸಿ.ಕೃಷ್ಣಮೂರ್ತಿ, ಪ್ರೊ. ಎಸ್.ಸಿ. ಸಿರಾಳಶೆಟ್ಟಿ ಇತರರು ಉಪಸ್ಥಿತರಿದರು.

ಅಮೂರ್ತ ಶೀರ್ಷಿಕೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಪ್ರೊ. ಪಿ.ಜಿ. ಪಾಟೀಲ ಸ್ವಾಗತಿಸಿ, ಆರ್.ಎಸ್. ದ್ಯಾವನಾಳ ವಂದಿಸಿದರು, ಸಾನಿಯಾ ಜಿದ್ದಿ ಮತ್ತು ಸ್ವಾತಿ ಜೋಶಿ ನಿರೂಪಿಸಿದರು. ಸಮ್ಮೇಳನದಲ್ಲಿ ಪ್ರಾಧ್ಯಾಪಕರುಗಳು, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಭಾಗವಹಿಸಿದರು.

ಸಂಜೆ ದರ್ಪಣ
ವಾಣಿಜ್ಯ ರಾಜಧಾನಿಯ ಜನಮನದ ಧ್ವನಿ
Sanje Darpana Evening Daily

# ಗಣಿತಶಾಸ್ತ್ರಜ್ಞರ ಬೆಳವಣಿಗೆ ಕವಿವಿ ಗುರಿ : ಹೊರಟ್ಟಿ




**ಧಾರವಾಡ:** ಉಪನ್ಯಾಸಗಳು, ವಿಚಾರ ಸಂಕಿರಣಗಳು ಕಲಿಕೆಯ ಜೊತೆಗೆ ಸಂಶೋಧನೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮಹತ್ವದ ಕಾರ್ಯ ನಿರ್ವಹಿಸುತ್ತಾ ಬಂದಿದೆ ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಕವಿವಿಯ ಗಣಿತಶಾಸ್ತ್ರ ವಿಭಾಗವು, ಪಾವಟೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸ್ ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಗಣಿತ ವಿಶ್ಲೇಷಣೆ ಮತ್ತು ಅದರ ಅನ್ವಯಗಳ ಕುರಿತು ಮೂರು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಯುವ ಗಣಿತಶಾಸ್ತ್ರಜ್ಞರನ್ನು ಬೆಳೆಸುವಲ್ಲಿ ವಿಭಾಗವು ಶ್ರಮಿಸುತ್ತಿದೆ ಎಂದರು. ಅಲ್ಲದೆ ಪಾವಟೆಯವರು ನಮ್ಮ ಕನ್ನಡ ನಾಡಿನಲ್ಲಿ ಹುಟ್ಟಿರುವುದು ನಮ್ಮ ಸೌಭಾಗ್ಯ, ವಿದ್ಯಾರ್ಥಿಗಳೆಲ್ಲರೂ ಅವರಂತಾಗಲು ಪ್ರಯತ್ನಿಸಬೇಕು ಹಾಗೂ ಅವರನ್ನು ಅನುಸರಿಸಬೇಕು ಎಂದು ಕಿವಿ ಮಾತು ಹೇಳಿದರು.

ಕವಿವಿ ಕುಲಪತಿ ಪ್ರೊ. ಕೆ. ಬಿ. ಗುಡಸಿ ಮಾತನಾಡಿ, ವಿದ್ಯಾರ್ಥಿಗಳು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ಅವರಿಂದ ಜ್ಞಾನ ಪಡೆದುಕೊಳ್ಳಬೇಕು ಎಂದು ಹೇಳಿದರು. ವಿಶ್ರಾಂತ ಕುಲಪತಿ ಪ್ರೊ. ಹೆಚ್. ಬಿ. ವಾಲಿಕಾರ ಮಾತನಾಡಿ, ತರ್ಕವು ಗಣಿತಶಾಸ್ತ್ರದ ಅಡಿಪಾಯ. ಡಾ. ಡಿ. ಸಿ. ಪಾವಟೆಯವರ ಜನ್ಮದಿನದಂದು ಇಂತಹ ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತಸದ ವಿಷಯ ಎಂದರು.

ಡಾ. ಸಿ. ಕೃಷ್ಣಮೂರ್ತಿ, ಡಾ. ವೀರಣ್ಣ ಬೋಳಿಶೆಟ್ಟಿ, ಡಾ. ಆರ್ಯಕುಮಾರ ಬಿ. ಚಂದ, ಪ್ರೊ. ಎನ್. ಬಿ. ನಡುವಿನಮನಿ, ಡಾ. ಜಿ. ಹರಿಹರನ್, ಪ್ರೊ. ಎಸ್. ಸಿ. ಶಿರಾಳಶೆಟ್ಟಿ, ಪ್ರೊ. ಬಿ. ಬಸನಗೌಡ ಇತರರು ಉಪಸ್ಥಿತ–ರಿದ್ದರು. ಅಮೂರ್ತ ಶೀರ್ಷಿಕೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಪ್ರೊ. ಪಿ.ಜಿ.ಪಾಟೀಲ ಸ್ವಾಗತಿಸಿ, ಆರ್. ಎಸ್. ದ್ಯಾವನಾಳ ವಂದಿಸಿದರು, ಸಾನಿಯಾ ಜಿದ್ದಿ ಮತ್ತು ಸ್ವಾತಿ ಜೋಶಿ ನಿರೂಪಿಸಿದರು. ಸಮ್ಮೇಳನದಲ್ಲಿ ಪ್ರಾಧ್ಯಾಪಕರುಗಳು, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

Main Edition
Aug 3, 2024 Page No. 4

facebook.com/vijaykarnataka www.vijaykarnataka.com ವಿಜಯ ಕರ್ನಾಟಕ

# ಗಣಿತ ಶಾಸ್ತ್ರಜ್ಞರನ್ನು ಹುಟ್ಟು ಹಾಕುವುದೇ ವಿವಿ ಗುರಿ

ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಮೂರ್ತ ಎಂಬ ಪುಸ್ತಕ ಬಿಡುಗಡೆ ಮಾಡಲಾಯಿತು.



■ **ವಿಕ ಸುದ್ದಿಲೋಕ** ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯದ ಗಣಿತ ವಿಭಾಗ, ಪಾವಟೆ ಇನ್ಸ್ಟಿಟ್ಯೂಟ್ ಆಫ್ ಮ್ಯಾಥ್ಮೆಟಿಕಲ್ ಸೈನ್ಸಸ್ ಸಹಯೋಗದಲ್ಲಿ ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ ಗಣಿತದ ವಿಶ್ಲೇಷಣೆ ಮತ್ತು ಅನ್ವಯಗಳ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನವನ್ನು ವಿಧಾನ, ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಉಪನ್ಯಾಸ, ಸಮ್ಮೇಳನಗಳು ಕಲಿಕೆ ಮತ್ತು ಸಂಶೋಧನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಯುವ ಗಣಿತ ಶಾಸ್ತ್ರಜ್ಞರನ್ನು ಹುಟ್ಟು ಹಾಕುವುದು ವಿಶ್ವವಿದ್ಯಾಲಯಗಳ ಮುಖ್ಯ ಗುರಿಯಾಗಿದೆ. ಡಾ. ಪಾವಟೆಯವರು ಕನ್ನಡ ನಾಡಿನಲ್ಲಿ ಹುಟ್ಟಿರುವುದು ನಮ್ಮ ಸೌಭಾಗ್ಯ. ವಿದ್ಯಾರ್ಥಿಗಳೆಲ್ಲರೂ ಅವರ ಸಾಧನೆಯ ರೀತಿಯಲ್ಲಿ ಬೆಳೆಯಬೇಕು ಎಂದರು.

ಕುಲಪತಿ ಪ್ರೊ.ಕೆ.ಬಿ.ಗುಡಸಿ ಮಾತನಾಡಿ, ವಿದ್ಯಾರ್ಥಿಗಳು ಸಮ್ಮೇಳನದ ಸದುಪಯೋಗ ಪಡೆದುಕೊಳ್ಳಬೇಕು. ಜತೆಗೆ ಸಂಪನ್ಮೂಲ ತಜ್ಞರೊಂದಿಗೆ ಚರ್ಚಿಸಿ ಅವರಲ್ಲಿರುವ ಜ್ಞಾನವನ್ನು ಪಡೆದುಕೊಳ್ಳಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಅಮೂರ್ತ ಎಂಬ ಪುಸ್ತಕ ಬಿಡುಗಡೆ ಮಾಡಲಾಯಿತು. ಜತೆಗೆ ಕವಿವಿ ಗಣಿತ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಬಿ. ಬಸವನಗೌಡ ಅವರನ್ನು ಸನ್ಮಾನಿಸಲಾಯಿತು.

ವಿಶ್ರಾಂತ ಕುಲಪತಿ ಪ್ರೊ. ಎಚ್.ಬಿ. ವಾಲೀಕಾರ, ಡಾ. ಆರ್ಯಕುಮಾರ ಬಿ. ಚಂದ, ಪ್ರೊ. ಎನ್.ಬಿ. ನಡುವಿನಮನಿ, ಡಾ. ವೀರಣ್ಣ ಡಿ. ಬೋಳಿಶೆಟ್ಟಿ, ಪ್ರೊ. ಎಸ್.ಸಿ. ಶಿರಾಳಶೆಟ್ಟಿ, ಡಾ.ಸಿ.ಕೃಷ್ಣಮೂರ್ತಿ, ಪ್ರೊ. ರಾಮ್ಮೂಣೆ, ಡಾ. ಪಿ.ಜಿ. ಪಾಟೀಲ್ ಉಪಸ್ಥಿತರಿದ್ದರು.